# B.A IVTH SEMESTER

# UNIT V : VIOLENCE AGAINST WOMEN

## A) MEANING AND DEFINITION OF VIOLENCE

## ಮಹಿಳೆಯರ ವಿರುದ್ಧ ಹಿಂಸೆ

ಜಗತ್ತಿನಾದ್ಯಂತ ಸಮಾಜದ ಪ್ರತಿಯೊಂದು ಭಾಗದಲ್ಲಿ ಮಹಿಳೆಯರ ವಿರುದ್ಧ ಹಿಂಸೆಗಳು ಆಗುವುದು ಕಂಡು ಬರುತ್ತದೆ. ಹಿಂಸೆ ಎಂದರೆ ಮಾನಸಿಕವಾಗಿ, ದೈಹಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶೋಷಣೆಯನ್ನು ಮಾಡುವುದು. ಅಥವಾ ಬೆದರಿಕೆ, ಭಯವನ್ನು ಹುಟ್ಟಿಸುವುದು ಮತ್ತು ದುಷ್ಟ ಕಾರ್ಯಗಳು ಮಾಡಲು ಮಹಿಳೆಯರನ್ನು ಒತ್ತಾಯಿಸುವುದು ಮತ್ತು ಸಮಾಜದಲ್ಲಿ ಮಹಿಳೆಯರ ಮಾನವೀಯ ಸ್ಥಾನಮಾನಕ್ಕೆ ಧಕ್ಕೆಯನ್ನುಂಟು ಮಾಡುವುದು ಹಿಂಸೆ ಎನಿಸುತ್ತದೆ. ಹೀಗಾಗಿ ಈ ಹಿಂಸೆಯು ಇಂದಿನ ಕಾಲದ ಸಮಸ್ಯೆಯಾಗಿರದೆ ಪ್ರಾಚೀನ ಕಾಲದಿಂದಲು ಅಸ್ತಿತ್ವದಲ್ಲಿದ್ದು ಇತ್ತೀಚಿನ ದಿನಗಳಲ್ಲಿ ಗಂಭೀರವಾದ ಕಂಡುಬರುತ್ತಿದೆ. ಉದಾ: ಪ್ರಾಚೀನ ಪ್ರಾಚೀನ ಕಾಲದಲ್ಲಿ ಬಾಲ್ಯವಿವಾಹವನ್ನು ಹೆಣ್ಣುಮಕ್ಕಳನ್ನು ರಕ್ಷಿಸುವ ನಿಟ್ಟಿನಲ್ಲಿ ಮಾಡಲಾಗುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ಹೆಣ್ಣುಮಕ್ಕಳು ಭಾರವನ್ನು ಅಥವಾ ಜವಾಬ್ದಾರಿಯಿಂದ ಮುಕ್ತರಾಗಲು ಮಾಡುತ್ತಿರುವುದ ಅತ್ಯಂತ ಚಿಂತೆಯ ವಿಷಯವಾಗಿದೆ. ಕಾರಣ ಹೆತ್ತವರು ಹೆಣ್ಣು ಮಕ್ಕಳ ಕಷ್ಟ ಸುಖಗಳ ಬಗ್ಗೆ ಚಿಂತಿಸದೆ ಬಾಲ್ಯವಿವಾಹ ಮಾಡುತ್ತಿರುವುದು. ಅದೇ ರೀತಿಯಾಗಿ ಸತೀ ಆಚರಣೆಯು ಮಹಿಳೆಯರ ಸ್ವಾಭಿಮಾನವನ್ನು ರಕ್ಷಿಸುವುದಾಗಿತ್ತು ಆದರೆ ಮಧ್ಯಕಾಲದಲ್ಲಿ ಇದು ಸ್ತ್ರೀಯರಿಗೆ ಇಷ್ಟವಿಲ್ಲದಿದ್ದರೂ ಸತಿ ಸಹಗಮನ ಹೊಂದುವುದು ಕಡ್ಡಾಯಗೊಳಿಸಿದರು ಇದು ಕೂಡ ಒಂದು ರೀತಿಯಲ್ಲಿ ಮಹಿಳೆಯ ವಿರುದ್ಧ ಹಿಂಸೆ ಎನಿಸಿಕೊಳ್ಳುತ್ತದೆ. ಕಾರಣ ವಿಧವೆಯಾದ ಮಹಿಳೆಯರು ಸಮಾಜದಲ್ಲಿ ಇತರ ಮಹಿಳೆಯರಂತೆ ಜೀವನ ಮಾಡಲು ಸಾಧ್ಯವಾಗದೆ ಎಲ್ಲರಿಂದಲೂ ತಿರಸ್ಕಾರಕ್ಕೊಳಗಾಗಿ ಅಪಮಾನದ ಜೀವನ ಮಾಡುತ್ತಿದ್ದರು. ಧಾರ್ಮಿಕ ಹೆಸರಿನಲ್ಲಿ ಮಹಿಳೆಯರನ್ನು ಬಸವಿ ಬಿಡುವುದು, ಗೆಜ್ಜೆಪೂಜೆ ಮಾಡುವ ಮೂಲಕ ಮಹಿಳೆಯರನ್ನು ದೇವರ ಸೇವೆಗೆ ನಿಯೋಜಿಸುತ್ತಿದ್ದರು, ಅದನ್ನು ದೇವದಾಸಿ ಪದ್ದತಿ ಎಂದು ಕರೆಯುತ್ತಾರೆ. ಈ ದೇವದಾಸಿ ಪದ್ಧತಿಯು ಮುಂದೆ ವೇಶ್ಯಾವಾಟಿಕೆ ಸಮಸ್ಯೆಗಳನ್ನು ಹುಟ್ಟುಹಾಕಿತು ಎಂದರೆ ತಪ್ಪಾಗಲಿಕಿಲ್ಲ.

ಸ್ವತಂತ್ರ ಭಾರತದ ಸಂವಿಧಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರವರು ಸ್ತ್ರೀ ಪುರುಷರಲ್ಲಿ ತಾರತಮ್ಯಗಳನ್ನು ಹೋಗಲಾಡಿಸಲು ಸಮಾನ ರೀತಿಯ ಹಕ್ಕು ಬಾಧ್ಯತೆಗಳನ್ನು ಕೊಡಮಾಡಿದರು. ಮತ್ತು ಆರ್ಥಿಕ, ಶೈಕ್ಷಣಿಕ, ಸಾಹಿತ್ಯ, ಸಾಮಾಜಿಕ, ಆಡಳಿತಾತ್ಮಕ ವೈಜ್ಞಾನಿಕ, ಕಾನೂನಾತ್ಮಕವಾಗಿ ಮಹಿಳೆಯರಿಗೆ ಸ್ಥಾನಮಾನಗಳನ್ನು ಪಡೆಯಲು ಅವಕಾಶವನ್ನು ಮಾಡಿಕೊಟ್ಟರು ಅವರ ವಿರುದ್ಧ ಹಿಂಸೆಗಳು ಕಡಿಮೆಯಾಗಲಿಲ್ಲ. ಕಾರಣ ಈ ಹಿಂಸೆಗೆ ಸಮಾಜದ ಪ್ರತಿಯೊಬ್ಬರ ಮನೋಭಾವಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಹೀಗಾಗಿ ಮಹಿಳೆಯರ ವಿರುದ್ಧ ಹಿಂಸೆಗಳು ಅವರು ಹುಟ್ಟಿದ ಸ್ಥಳದಿಂದಲೆ ಆರಂಭವಾಗುತ್ತದೆ ಎನ್ನುವುದು ಶೋಚನೀಯ ವಿಷಯವಾಗಿದೆ. ಅಂದರೆ ಮಹಿಳೆಯರ ವಿರುದ್ಧದ ಹಿಂಸೆಗಳು ಈ ರೀತಿಯಾಗಿ ವಿಂಗಡಿಸಿ ಅರ್ಥಮಾಡಿಕೊಳ್ಳಬಹುದು. ಮಹಿಳೆಯರ ವಿರುದ್ಧದ ಹಿಂಸೆಗಳು ಕುಟುಂಬದ ಒಳಗಿನ ಹಿಂಸೆ, ಸಾಮಾಜಿಕ ಹಿಂಸೆ, ಆರ್ಥಿಕ ಹಿಂಸೆ ದಬ್ಬಾಳಿಕೆ ದೌರ್ಜನ್ಯ, ಸಾಮಾಜಿಕ ಸಂಬಂಧಗಳ ನಿರ್ವಹಣೆಯಲ್ಲಿ ಅವಮಾನ, ವೃತ್ತಿ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾಗುತ್ತವೆ. ಎಷ್ಟೋ ಮಹಿಳೆಯರು ಇಂತಹ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಯಶಸ್ವಿಯಾಗುತ್ತಾರೆ ಆದರೆ ಅದೆಷ್ಟೋ ಮಹಿಳೆಯರು ಈ ಸಮಸ್ಯೆಗಳನ್ನು ಎದುರಿಸಲಾಗಿದೆ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಬಲಿಯಾಗುತ್ತಾರೆ. ಹೀಗೆ ಬಲಿಯಾಗುವ ಮಹಿಳೆಯರ ವಿರುದ್ಧದ ಹಿಂಸೆಗಳು ಪ್ರಾಚೀನವಾದದ್ದು ಮತ್ತು ಅಲಕ್ಷಕ್ಕೆ ಒಳಗಾದ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಗಳಿಗೆ ಸಂಬಂಧಿಸದಂತೆ ಭಾರತ ದೇಶದಲ್ಲಿ ಕಂಡುಬರುವ ಹೀನ ವರ್ತನೆ, ಅಪಮಾನ ಮತ್ತು ಶೋಷಣೆ ಬಲತ್ಕಾರ , ಹೆಂಡತಿಗೆ ಹೊಡೆಯುವುದು ಕೊಲೆ ಮಾಡುವುದು, ಅಪಹರಣ, ಲೈಂಗಿಕ ಶೋಷಣೆ, ವರದಕ್ಷಿಣೆ ಸಾವು ಮುಂತಾದವು ಮಹಿಳೆಯರ ಕಿರುಕುಳ ರೂಪಗಳು ಮತ್ತು ಮಹಿಳೆಯರ ಗರ್ಭಪಾತ ಮಾಡುವುದರ ಮೂಲಕ ಹೆಣ್ಣು ಮಗುವನ್ನು ಗರ್ಭದಲ್ಲಿಯೇ ಸಾಯಿಸುವುದು ಕೂಡ ಮಹಿಳೆಯರ ವಿರುದ್ಧ ಹಿಂಸೆಯ ರೂಪವಾಗಿದೆ. ಹೀಗೆ ಮಹಿಳೆಯರ ವಿರುದ್ಧದ ಹಿಂಸೆಯ ಹತ್ತು ಹಲವು ರೂಪಗಳು ಮತ್ತು ಹಿಂಸೆಯನ್ನು ಮಾಡಲು ಕಾರಣವಾದ ಅಂಶಗಳು ಹಾಗೂ ಈ ಹಿಂಸೆಯನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಕೊಂಡ ಕ್ರಮಗಳನ್ನು ವಿವಿಧ ಅಂಶಗಳನ್ನು ವಿವರಿಸೋಣ.

## ಹಿಂಸೆಯ ಅರ್ಥ MEANING OF VIOLENCE

ಹಿಂಸೆ ಎಂದರೆ ಒಬ್ಬ ವ್ಯಕ್ತಿಯ ಇಚ್ಛೆಯ ವಿರುದ್ಧವಾಗಿ ಮಾನಸಿಕವಾಗಿ ನೋವನ್ನುಂಟು ಮಾಡುವುದು, ತೊಂದರೆಯನ್ನು ಕೊಡುವುದು, ಹೊಡೆಯುವುದು, ಬಲತ್ಕಾರ ಮಾಡುವುದು,

ದೈಹಿಕವಾಗಿ ಗಾಯಗೊಳಿಸುವದು ಅವರ ಆಸ್ತಿಗಳನ್ನು ಅತಿಕ್ರಮಿಸುವದನ್ನು ಹಿಂಸೆ ಎಂದು ಕರೆಯುತ್ತಾರೆ.

## ಹಿಂಸೆಯ ವ್ಯಾಖ್ಯೆ DEFINITION OF VIOLENCE

ಸಮಾಜ ವಿಜ್ಞಾನದ ವಿಶ್ವಕೋಶದ ಪ್ರಕಾರ" ವೈಯಕ್ತಿಕ ಮತ್ತು ಗುಂಪಿನ ಲಾಭಕ್ಕಾಗಿ ದೈಹಿಕ ಶಕ್ತಿಯ ಅಶಾಸನಾತ್ಮಕ ಬಳಕೆಯ ವಿಧಾನಗಳನ್ನು ಹಿಂಸೆ "ಎಂದು ಕರೆಯುತ್ತಾರೆ.

ವ್ಯಕ್ತಿ ಅಥವಾ ಆಸ್ತಿಗೆ ಘಾಸಿ ಅಥವಾ ತೊಂದರೆ ಉಂಟಾಗುವ ರೀತಿಯಲ್ಲಿ ಮಾಡಿದ ಬಲಪ್ರಯೋಗವನ್ನು ಹಿಂಸೆ ಎಂದು ವ್ಯಾಖ್ಯಾನಿಸಲಾಗಿದೆ.

ಗೆಲ್ಲೆಸ: "ವ್ಯಕ್ತಿಗೆ ತೊಂದರೆಯನ್ನು ಉಂಟು ಮಾಡುವ ಅಥವಾ ಘಾಸಿಯನ್ನುಂಟು ಮಾಡುವ ಉದ್ದೇಶದಿಂದ ವ್ಯಕ್ತಿಯ ಮೇಲೆ ಆಕ್ರಮಣ ಮಾಡುವುದು ಆದರೆ ವಾಸ್ತವಿಕವಾಗಿ ಗಾಯವನ್ನಾಗಲಿ ತೊಂದರೆಯನ್ನಾಗಲಿ ಉಂಟು ಮಾಡದೆ ಇರುವುದಾಗಿದೆ".

ಸ್ಟ್ರಾಸ್: "ಘಾಸಿಗೊಳಿಸುವ ಸಂಭಾವ್ಯತೆ ಹೆಚ್ಚಾಗಿರುವ ಕಾರ್ಯವನ್ನು ಹಿಂಸೆ " ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಾರ್ಗರೇಟ್: "ಹಿಂಸೆಯ ವ್ಯಕ್ತಿಗಾಗಲಿ, ಆಸ್ತಿಗಾಗಲಿ ಉಂಟು ಮಾಡಿದ ಅನುಮನಿತ ಹಾನಿ"ಯನ್ನು ಹಿಂಸೆ ಎಂದಿದ್ದಾರೆ.

ಡೊಮೆನಾಕ್‌ರವರ ಪ್ರಕಾರ " ಮತ್ತೊಬ್ಬರ ಸ್ವಾತಂತ್ರ್ಯವನ್ನು ಅತಿಕ್ರಮಿಸುವ ಪ್ರಯತ್ನವನ್ನು ಹಿಂಸೆ " ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮಿಗಾರ್ಗಿಯವರ ಪ್ರಕಾರ " ವ್ಯಕ್ತಿಯನ್ನು ಗಾಯಗೊಳಿಸುವ ಹಾಳು ಮಾಡುವ ಅಥವಾ ಅವನ ಮರ್ಯಾದೆಗೆ ಧಕ್ಕೆ ತರುವ ಯಾವುದೇ ಪ್ರಕಟಿತ ಹೆದರಿಕೆ ಅಥವ ಶಕ್ತಿಯ ಪ್ರಯೋಗವನ್ನು ಹಿಂಸೆ" ಎಂದು ಕರೆದಿದ್ದಾರೆ.

ರಾಮ್ ಅಹುಜಾರವರ ಪ್ರಕಾರ " ಹೆಚ್ಚು ಶಕ್ತಿಶಲಿಯಾದ ವ್ಯಕ್ತಿ ಕಡಿಮೆ ಶಕ್ತಿಶಲಿಯಾದ ವ್ಯಕ್ತಿಯ ವಿರುದ್ಧ ಪ್ರಯೋಜನವನ್ನು ಪಡೆದು ನಿಂದಿಸುವ ವರ್ತನೆಯನ್ನು ಹಿಂಸೆ ಎಂದು ಕರೆದಿದ್ದಾರೆ.

## ಮಹಿಳೆಯರ ವಿರುದ್ಧದ ಹಿಂಸೆಯ ಸ್ವಭಾವ NATURE OF VIOLENCE

## ಅಪರಾಧಜನ್ಯ ಹಿಂಸೆ VIOLENCE RELATED TO CRIME

ಕಾನೂನಿನ ನೀತಿನಿಯಮಗಳನ್ನು ಉಲ್ಲಂಘಿಸುವ ಕಾರ್ಯವನ್ನು ಅಪರಾಧ ಎನ್ನುತ್ತಾರೆ. ಅಪರಾಧವೆಂದರೆ ಶಾಸನವನ್ನು ನಿಷೇಧಿಸುವ ಕಾರ್ಯ, ಅಥವ ನ್ಯಾಯಾಲಯಗಳ ಮೂಲಕ ಶಿಕ್ಷೆಗೆ ಪಾತ್ರರಾಗುವಂತಹ ಉದ್ದೇಶಪೂರ್ವಕವಾಗಿ ಇತರರಿಗೆ ತೊಂದರೆ ಕೊಡುವುದು. ಉದಾ: ಬಲತ್ಕಾರ, ಅಪಹರಣ, ಕೊಲೆ, ಪೀಡನೆ, ಶೋಷಣೆ, ಸ್ತ್ರೀಯರ ಮೇಲಿನ ಕಿರುಕುಳ, ಅಕ್ರಮ ಸಂಭೋಗ, ಆಸ್ತಿಗಾಗಿ ಮಾಡುವ ಹಾನಿ, ವರದಕ್ಷಿಣೆ ಸಾವು ಮತ್ತು ವೈಯಕ್ತಿಕ ಲಾಭಕ್ಕಾಗಿ ಮಹಿಳೆಯರ ಮೇಲೆ ಎಸಗುವ ಘಾಸಿ ಅಥವಾ ತೊಂದರೆಗಳನ್ನುಂಟು ಮಾಡುವ ಬಲಪ್ರಯೋಗವನ್ನು ಅಪರಾಧ ಜನ್ಯ ಹಿಂಸೆಗಳೆಂದು ಕರೆಯುತ್ತಾರೆ.

ಅಪರಾದ ಎಂದರೆ ಕಾನೂನಿನ ನಿಯಮಗಳನ್ನು ಉಲ್ಲಂಘಿಸುವುದು ಎಂದು ಅರ್ಥವಾದರೆ

ಅಪಹರಣ: ಅಪಹರಣವು ಲೈಂಗಿಕ ಕೃತ್ಯಕ್ಕಾಗಿ, ಹಣಕ್ಕಾಗಿ, ರಾಜಕೀಯ ಕಾರ್ಯಕ್ಕಾಗಿ ಮಹಿಳೆಯರನ್ನು ಅಥವಾ ವಯಸ್ಕ ಹುಡುಗಿಯನ್ನು ಪಾಲಕರ ಅನುಮತಿಯಿಲ್ಲದೆ ಎತ್ತಿಕೊಂಡು ಹೋಗುವುದನ್ನು

ಕೊಲೆ: ನರಹತ್ಯೆಯ ಸ್ತ್ರೀಯರಿಗಿಂತ ಪುರುಷರು ಹೆಚ್ಚಾಗಿ ಒಳಗಾಗುತ್ತಾರೆ. ಭಾರತದಲ್ಲಿ ಪ್ರತಿವರ್ಷ 38000ಕೊಲೆ ಪ್ರಕರಣಗಳು ದಾಖಲಾಗಿದ್ದರೆ ಅದರಲ್ಲಿ 10–15ರಷ್ಟು ಮಹಿಳೆಯರಾಗಿರುತ್ತಾರೆ.

## ಕೌಟುಂಬಿಕ ಹಿಂಸೆ: VIOLENCE IN FAMILY

ಹೆಣ್ಣಿನ ಸುರಕ್ಷಿತ ಸಾಮಾಜಿಕ ಸಂಸ್ಥೆಯಾಗಿದ್ದ ಕುಟುಂಬದಲ್ಲಿಯೆ ಅವರ ಸ್ಥಾನಮಾನಗಳು, ತೊಡಕುಗಳು, ಲಿಂಗತಾರತಮ್ಯ, ಬ್ರೂಣಹತ್ಯ, ಬಹುಪತ್ನಿತ್ವದಿಂದ, ಬಾಲ್ಯವಿವಾಹ, ವೈಧವ್ಯ, ಹೊಡೆತ, ಬೈಗುಳ ಲೈಂಗಿಕ ಕಿರುಕುಳ ಮತ್ತು ಮಹಿಳೆಯರ ಮಾನಸಿಕ ಸಂವೇದನೆಗಳಿಗೆ ಬೆಲೆಯೆ ಇರುವುದಿಲ್ಲ. ಮನೆಯೊಳಗೆ ಸೊಸೆಯನ್ನು ಕಿರುಕುಳ ಮಾಡುವುದು, ಹೊಡೆಯುವುದು, ಸ್ತ್ರೀ ಪುರುಷರ ನಡುವಿನ ತಾರತಮ್ಯಗಳು, ವರದಕ್ಷಿಣೆ ಸಾಷು, ವಿಧವೆ ಮತ್ತು ದೇವದಾಸಿಯರನ್ನು ಅವ್ಯವಹಾರವಾಗಿ ನಡೆಸಿಕೊಳ್ಳುವುದು. ವೃದ್ಧರ ಸಮಸ್ಯೆಗಳು, ಆಗಮ್ಯ ಗಮನ ನಿಷೇಧದ ಉಲ್ಲಂಘನೆ ಮಾಡುವುದು, ವೃದ್ಧರ ಸಮಸ್ಯಗಳನ್ನು ಸ್ವಂತ ಪತ್ನಿಯರ ಮೇಲೆ ಅತ್ಯಾಚಾರ ನಡೆಸುವುದು ಮಹಿಳೆಯರ ಮೇಲೆ ದೈಹಿಕ ಮತ್ತು ಮಾನಸಿಕವಾಗಿ ಶೋಷಣೆಯನ್ನು ಮಾಡುವುದು ಗೃಹ ಸಂಬಂಧಿ ಹಿಂಸೆಯಾಗಿದೆ. ಅದರಲ್ಲಿ ಹೆಚ್ಚಿನ ಶೋಷಣೆಯನ್ನುಂಟು ಮಾಡುವ ವರದಕ್ಷಿಣೆ

ಸಾವು ಮತ್ತು ಹೆಂಡತಿಯನ್ನು ಹೊಡೆಯುವುದು, ವಿಧವೆಯರ ವಿರುದ್ಧ ಶೋಷಣೆಗಳ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

## ಸಾಮಾಜಿಕ ಹಿಂಸೆ: SOCIAL VIOLENCE

ಬ್ರೂಣ ಹತ್ಯೆ, ಗರ್ಭಪಾತಕ್ಕೆ ಸ್ತ್ರೀಯರನ್ನು ಪ್ರೇರೇಪಿಸುವುದು, ಕುಟುಂಬ ಯೋಜನೆಯ ಕ್ರಮವಾಗಿ ಸ್ತ್ರೀಯರ ಜನನಾಂಗಗಳ ಛೇದನಕ್ಕೆ ಒತ್ತಡ ತರುವುದು, ಹೆಣ್ಣು ಮಕ್ಕಳಿಗೆ ಕೀಟಲೆ ಮಾಡುವುದು. ಅಪ್ರಾಪ್ತ ಹೆಣ್ಣು ಮಕ್ಕಳನ್ನು ಅಪಹರಿಸಿ ವಿವಾಹವಾಗಲು ಒತ್ತಾಯಿಸುವುದು ವಿವಾಹಕ್ಕೆ ಲೈಂಗಿಕ ವ್ಯವಹಾರಕ್ಕೆ ವಲ್ಲದ ಹೆಣ್ಣು ಮಕ್ಕಳ ಮುಖದ ಮೇಲೆ ಆ್ಯಸಿಡ ಎರಚಿ ಅವರನ್ನು ವಿರೂಪಗೊಳಿಸುವುದು. ಸ್ತ್ರೀಯರಿಗೆ ಆಸ್ತಿಯಲ್ಲಿ ಅವರ ಪಾಲನ್ನು ಕೊಡದೆ ನಿರಾಕರಣೆ ಮಾಡುವುದು ಅರೆಹೊಟ್ಟೆ ಊಟ ಮಾಡುವಂತೆ ಮಾಡುವುದು ಸತಿಯಾಗಲು ಬಲತ್ಕರಿಸುವುದು, ಬಾಲ್ಯವಿವಾಹ ಮಾಡುವುದು, ಅವಿಶ್ರಾಂತವಾಗಿ ದುಡಿಮೆಗೆ ಒಳಪಡಿಸುವುದು, ಬ್ರೂಣ ಹತ್ಯಗೆ ಬಲತ್ಕರಿಸುವುದು ಮತ್ತು ಸೊಸೆಗೆ ಕಿರುಕುಳ ಕೊಡುವುದು.

## ಮಹಿಳೆಯರ ವಿರುದ್ಧ ಹಿಂಸೆಯ ಪರಿಣಾಮಗಳು
## CONSEQUENCES OF VIOLENCE AGAINST WOMEN

ಸ್ತ್ರೀಯರ ವಿರುದ್ಧದ ಹಿಂಸೆಯು ಯಾವಾಗ, ಹೇಗೆ ಎಲ್ಲಿ ಮತ್ತು ಎಂತಹ ಸನ್ನಿವೇಶಗಳಲ್ಲಿ ಸಂಭವಿಸುತ್ತವೆ ಎಂದು ಹೇಳುವುದು ಸುಲಭಸಾಧ್ಯವಿಲ್ಲ. ಹಾಗಾಗಿ ಇಂತಹ ಸಮಸ್ಯೆಗಳಿಗೆ ಮಹಿಳೆಯರಲ್ಲಿ ಜೀವನದ ಮೇಲೆ ಸಂಭವಿಸುವಂತಹ ಇಂತಹ ಹಿಂಸೆಯ ಪರಿಣಾಮಗಳು ಬೇರೊಂದು ಸಮಸ್ಯೆಗೆ ದಾರಿ ಮಾಡಿಕೊಡುತ್ತದೆ. ಉದಾಹರಣೆಗೆ ಸಮಾಜದಲ್ಲಿ ಹಿಂಸೆಯು ಮಹಿಳೆಯರಲ್ಲಿ ಭಯವನ್ನುಂಟು ಮಾಡುತ್ತದೆ. ಮಹಿಳೆಯರ ವರ್ತನೆಗಳಲ್ಲಿ ಬದಲಾವಣೆಗಳು ಬರುತ್ತವೆ. ಅನಾರೋಗ್ಯದ ಸಮಸ್ಯೆಗಳು ಉಂಟಾಗುತ್ತವೆ. ಸ್ತ್ರೀಯರ ಸಂಖ್ಯೆಯು ಇಳಿಮುಖವಾಗುತ್ತವೆ.

1. ಜನರಲ್ಲಿ ಭಯವನ್ನುಂಟು ಮಾಡುತ್ತದೆ. Creates fear among women
2. ಸ್ತ್ರೀಯರ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನು ತರುತ್ತದೆ. Disturbs women freedom
3. ಸಮಾಜಕ್ಕೆ ಭೌತಿಕ ನಷ್ಟವಾಗುತ್ತದೆ. Socially Geographical loss
4. ಕೌಟುಂಬಿಕ ಅಭದ್ರತೆ Insecure family

5. ಮಕ್ಕಳ ಪೋಷಣೆಯ ಮೇಲೆ ಪ್ರಭಾವ ಬೀರುತ್ತವೆ. Impact on children Growth
6. ಮಾನಸಿಕ ಸಮಸ್ಯೆಗಳು ಉಂಟಾಗುತ್ತವೆ Psychological consequences
7. ಲಿಂಗ ಮತ್ತು ಬಲಪ್ರಯೋಗದ ಚಲನೆ Movement of gender and force
8. ದೈಹಿಕವಾಗಿ ಪರಿಣಾಮ ಬೀರುತ್ತದೆ Physical consequences
9. ಸಮವಯಸ್ಕರ ಮೇಲೆ ಪರಿಣಾಮ ಬೀರುತ್ತದೆ Impact on peer groups

## ಮಹಿಳೆಯರ ವಿರುದ್ಧ ಹಿಂಸೆಯ ಪರಿಹಾರೋಪಾಯಗಳು
## REMEDIAL MEASURES OF VIOLENCE AGAINST WOMEN

ವ್ಯಕ್ತಿಯಲ್ಲಿ ಜ್ಞಾನದ ಮಜಲು ಕ್ಷೀಣಿಸಿದಾಗ ಅಥವಾ ತಿಳುವಳಿಕೆಯು ನಾಶಹೊಂದಿದಾದ ಸರಿ ತಪ್ಪುಗಳ ವ್ಯತ್ಯಾಸಗಳು ಗುರುತಿಸದೆ ಸಮಾಜ ಮತ್ತು ಜನರನ್ನು ದೂಷಿಸಿ, ಹಿಂಸಾಕೃತರು ಕ್ರೂರವಾದ ಕಾರ್ಯಗಳು ಕೈಗೊಳ್ಳುತ್ತಾರೆ. ಈ ಹಿಂಸೆಯು ಇನ್ನೊಬ್ಬರ ಜೀವನದಲ್ಲಿ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂದು ತಿಳಿಯದೆ ಇಂತಹ ಹಿಂಸೆಗಳು ಮಾಡತ್ತಿರುತ್ತಾರೆ. ಹಿಂಸೆಗೆ ಬಲಿಯಾದ ಮಹಿಳೆಯರು ಮಾನಸಿಕವಾಗಿ ಕ್ಷೋಬೆಗೆ ಒಳಗಾಗುತ್ತಾರೆ ಮತ್ತು ನಿರಾಶ್ರಿತರಾಗಿರುವ ಸ್ತ್ರೀಯರನ್ನು ಪುನರ್ವಸತಿಕರಣಗೊಳಿಸಲು ಅಂತಹ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳುತ್ತಿರುವ ವ್ಯವಸ್ಥೆಗಳು ಪ್ರಮಾಣಿಕವಾಗಿ ಅನುಷ್ಠಾನ ಮಾಡುವುದರ ಮೂಲಕ ಸಮಾಜದಲ್ಲಿರುವ ಇಂತಹ ಹಿಂಸಾ ಕೃತ್ಯಗಳನ್ನು ತಡೆಗಟ್ಟಲು ಮತ್ತು ಸೂಕ್ತವಾದ ಸಲಹೆ ಸೂಚನೆಗಳನ್ನು ಸರ್ಕಾರದವರು ಜಾರಿಗೊಳಿಸಬೇಕು ಮತ್ತು ಸರ್ಕಾರದ ಈ ಸೂಚನೆಗಳನ್ನು ಸಾರ್ವಜನಿಕರು ಪಾಲಿಸುವ ಮೂಲಕ ಪರಿಹಾರವನ್ನು ಕಂಡುಕೊಳ್ಳಬಹುದು ಎಂದು ತಿಳಿಯಲು ಈ ಕೆಳಗಿನ ಅಂಶಗಳನ್ನು ಪಟ್ಟಿಮಾಡಲಾಗಿದೆ.

1. ಹಿಂಸಾಚಾರದ ಖಂಡನೆ ಮಾಡುವುದು
2. ಸೂಕ್ತವಾದ ಆಡಳಿತಾತ್ಮಕ ಕ್ರಮ ಕೈಗೊಳ್ಳುವುದು
3. ಹಿಂಸೆಗೆ ಬಲಿಯಾದವರಿಗೆ ರಕ್ಷಣೆಯನ್ನು ಒದಗಿಸುವುದು
4. ಹಿಂಸೆಗೆ ಬಲಿಯಾದವರಿಗೆ ಬೆಂಬಲ ನೀಡುವುದು
5. ಅತ್ಯಾಚಾರಿಗಳಿಗೆ ಅಥವಾ ಅಪರಾಧಿಗಳಿಗೆ ತಕ್ಷಣ ಶಿಕ್ಷೆ ನೀಡುವುದು
6. ಹಿಂಸೆಗೆ ಬಲಿಯಾದವರಿಗೆ ನ್ಯಾಯವನ್ನು ಒದಗಿಸುವುದು

7. ಹಿಂಸೆಗೆ ಬಲಿಯಾದವರಿಗೆ ಕಾನೂನಿನ ಸಹಾಯ ಸುಲಭವಾಗಿ ದೊರೆಯುವಂತಾಗಬೇಕು
8. ಸ್ತ್ರೀಯರ ಸಮಸ್ಯೆಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ತರಬೇತಿಗಳನ್ನು ನೀಡುವುದು
9. ಹಿಂಸೆಗೆ ಬಲಿಯಾದವರಿಗೆ ಆರ್ಥಿಕ ನೆರವನ್ನು ಕಲ್ಪಿಸುವುದು
10. ಪಾಲಕರ ಮತ್ತು ಪೋಷಕರ ಮನೋಭಾವವವನ್ನು ಬದಲಾಯಿಸುವುದು
11. ಹಿಂಸಾಕೃತ್ಯದ ಬಗ್ಗೆ ತಿಳಿದುಕೊಳ್ಳಲು ಸಂಶೋಧನೆಗಳನ್ನು ಕೈಗೊಂಡು ಸೂಕ್ತವಾದ ವರದಿಯನ್ನು ಸಲ್ಲಿಸುವುದು.
12. ವಿಶೇಷವಾದ ನ್ಯಾಯಾಲಯಗಳ ಸ್ಥಾಪನೆ
13. ಪುನಶ್ಚೇತನ ಶಿಬಿರಗಳನ್ನು ಹಮ್ಮಿಕೊಳ್ಳುವುದು
14. ಕಾನೂನಿನ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು
15. ಮಾಧ್ಯಮಗಳಲ್ಲಿ ಮಹಿಳೆಯರ ಹಿಂಸೆಯು ವಿಷಯವನ್ನು ಪ್ರಚೋದನಕಾರಿಯಾಗಿ ತೋರಿಸಬಾರದು.
16. ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗವನ್ನು ಒದಗಿಸಬೇಕು.

## ಆಧಾರ ಗ್ರಂಥಗಳು


- ಪ್ರೋ.ಜಿ. ಸುಬ್ರಮಣ್ಯ (2017) ಸಮಕಾಲೀನ ಸಮಾಜಶಾಸ್ತ್ರ ಸಪ್ನ ಬುಕ್ ಹೌಸ 3ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು
- ಎಸ್. ಬಿ. ಜೋಗುರ (2008) ಸಮಾಜಶಾಸ್ತ್ರ ವಿಜೇತ್ ಪ್ರಕಾಶನ ಗದಗ
- ಚ.ನ ಶಂಕರರಾವ್ ಸಮಾಜಶಾಸ್ತ್ರದ ಸಮಸ್ಯೆಗಳು



PREPARED BY

Dr. Manikamma. N. Sultanpur, Asst. Prof. of Sociology, Smt. C. B. Patil Degree College Chincholi

Dr. A. G. Khan Associate professor of Sociology GFGC Chittapur


**THANK YOU**

STAY HOME, STAY SAFE AND STUDY STEADILY